### ರಾಜ್ಯಮಟ್ಟದ ರೈತರ ಸಮಾವೇಶ; ಕೇಂದ್ರ ನೀತಿ ಆಯೋಗದ ಸಿಇಒ ಅಮಿತಾಬ್ ಕಾಂತ್ ಭರವಸೆ

# ಕೃಷಿ ವಿಮೆ ವ್ಯಾಪ್ತಿಗೆ ಕಬ್ಬು, ಬಾಳೆ, ರೇಷ್ಮೆ

ಪ್ರಜಾವಾಣಿ ವಾರ್ತೆ

**ಮೈಸೂರು:** 'ಕಬ್ಬು, ಬಾಳೆ, ರೇಷ್ಮೆ ಬೆಳೆಯನ್ನು ಪ್ರಧಾನಮಂತ್ರಿ ಫಸಲ್ ಬಿಮಾ ಕೃಷಿ ವಿಮೆ ಯೋಜನೆ ವ್ಯಾಪ್ತಿಗೆ ತರಲು ಯತ್ನಿಸಲಾಗುವುದು' ಎಂದು ಕೇಂದ್ರ ಸರ್ಕಾರದ ನೀತಿ ಆಯೋಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಮಿತಾಬ್ ಕಾಂತ್ ಭರವಸೆ ನೀಡಿದರು.

ನಗರದ ಕಲಾಮಂದಿರದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘ ಮಂಗಳವಾರ ಆಯೋಜಿಸಿದ್ದ ರೈತರ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

'ಪ್ರಧಾನಿ ನರೇಂದ್ರ ಮೋದಿ ಜಾರಿಗೆ ತಂದಿರುವ ಫಸಲ್ ಬಿಮಾ ಕೃಷಿ ವಿಮೆ ಯೋಜನೆಯಿಂದ ಕೃಷಿಗೆ ಬಂದಿರುವ ಗಂಡಾಂತರದಿಂದ ಪಾರು ಮಾಡುವುದಾಗಿದೆ. ಮುಂಗಾರಿನಲ್ಲಿ ದ್ವಿದಳ ಧಾನ್ಯ, ಎಣ್ಣೆಕಾಳು ಬೆಳೆಗಳಿಗೆ ವಿಮಾ ಕಂತು ಶೇ 2ರಷ್ಟನ್ನು ರೈತರು ಕಟ್ಟಬೇಕು. ಹಿಂಗಾರಿನಲ್ಲಿ ಶೇ 1.5ರಷ್ಟು ವಿಮಾ ಕಂತನ್ನು ಕಟ್ಟಬೇಕು. ವಾರ್ಷಿಕ ಬೆಳೆ, ತೋಟಗಾರಿಕೆ ಬೆಳೆಗಳಿಗೆ ಶೇ 5ರಷ್ಟು ವಿಮಾ ಕಂತು ಕಟ್ಟಬೇಕು. ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರ ಒಟ್ಟು ₹ 5,500 ಕೋಟಿ ಮೀಸಲಿರಿಸಿದೆ' ಎಂದು ತಿಳಿಸಿದರು.

**ಕಾರ್ಯಪಡೆ ಸಜ್ಜಾಗಬೇಕು:** 'ದೇಶದಲ್ಲಿ ಹಸಿರು ಕ್ರಾಂತಿ ಮೂರು ಮಟ್ಟದಲ್ಲಾಗಿತ್ತು. ಕೇಂದ್ರ, ರಾಜ್ಯ ಹಾಗೂ ತಳಮಟ್ಟದಲ್ಲಿ ಆಗಿತ್ತು. ಆದರೆ, ಈಗ ತಳಮಟ್ಟದಲ್ಲಿರುವ ಕಾರ್ಯಪಡೆಯನ್ನು ಸಜ್ಜುಗೊಳಿಸಬೇಕು. ಜತೆಗೆ, ರೈತ ವಿ.ವಿ.ಗಳ ಸಂಶೋಧನೆ ಹಾಗೂ ತಂತ್ರಜ್ಞಾನಗಳನ್ನು ಸಂಘಟನೆಗಳು ಹಾಗೂ ರೈತ ಕಂಪೆನಿಗಳು ರೈತರಿಗೆ ತಲುಪಿಸಬೇಕು' ಎಂದರು.

'ಪ್ರತಿ ಮಳೆ ಹನಿಯೂ ಪ್ರತಿ ಹೊಲ ತಲುಪಬೇಕು. ಮಳೆನೀರು ಸಂರಕ್ಷಣೆಗೆ ಮುಂದಾಗಬೇಕು. ಇತಿಮಿತಿಯಿಲ್ಲದೆ ಅಂತರ್ಜಲ ಬಳಕೆ ಮಾಡುತ್ತಿರುವುದು ಸಮಸ್ಯೆಗಳನ್ನು ತಂದೊಡ್ಡಿದೆ. ಪಂಜಾಬಿನಲ್ಲಿ ಅತಿಯಾದ ಅಂತರ್ಜಲ ಬಳಕೆಯಿಂದ ವಿಷಯುಕ್ತ ಫ್ಲೋರೈಡ್ ಸಿಗುತ್ತಿದೆ. ಮುಂದಿನ ತಲೆಮಾರಿಗೆ ಮಣ್ಣು ಮತ್ತು ನೀರನ್ನು ವ್ಯವಸ್ಥಿತವಾಗಿ ಬಳಸಬೇಕಾದುದು ನಮ್ಮ ಕರ್ತವ್ಯ ಎಂದು ಅರಿಯಬೇಕು' ಎಂದರು.

**ರಾಷ್ಟ್ರೀಯ ಕೃಷಿ ಮಾರುಕಟ್ಟೆ:** 'ಆನ್‌ಲೈನ್ ಮಾರಾಟ ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಬಳಕೆಯಾಗುತ್ತಿದ್ದುದು ಮಾದರಿಯಾಗಿದೆ. ಇದನ್ನು ವಿಸ್ತರಿಸಿ ರಾಷ್ಟ್ರೀಯ ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ಜಾರಿಗೆ ಬರಬೇಕಿದೆ. ದೇಶದಾದ್ಯಂತ ಮಾರಾಟ ಮಾಡಲು ರೈತರಿಗೆ ಸಾಧ್ಯವಾಗಬೇಕು. ದೇಶದಾದ್ಯಂತ ನಡೆಯುವ ಟೆಂಡರ್ ಪ್ರಕ್ರಿಯೆಯಲ್ಲಿ ರೈತರು ಪಾಲ್ಗೊಂಡು ಸ್ಪರ್ಧಾತ್ಮಕ ಬೆಲೆ ಪಡೆಯುವಂತಾಗ ಬೇಕು' ಎಂದು ಹೇಳಿದರು.

'ಕೃಷಿ, ಜಾನುವಾರು ಸಾಕಾಣಿಕೆ, ಮೀನುಗಾರಿಕೆಯನ್ನು ರೈತರು ಅವಲಂಬಿಸಿದ್ದಾರೆ. ದೇಸಿ ಜಾನುವಾರು ತಳಿ ಅಭಿವೃದ್ಧಿಗೆ ಉತ್ತರ ಭಾರತದ ಹಾಗೂ ದಕ್ಷಿಣ ಕರ್ನಾಟಕದಲ್ಲೊಂದು ಕೇಂದ್ರವನ್ನು ಆರಂಭಿಸುವ ಯೋಜನೆಯಿದೆ. ಈ ಮೂಲಕ ಪಶುಸಂಗೋಪನೆ, ಹೈನುಗಾರಿಕೆಯಿಂದ ದೇಶದ ಒಟ್ಟಾರೆ ರಾಷ್ಟ್ರೀಯ ಉತ್ಪನ್ನ (ಜಿಡಿಪಿ) ಶೇ 25ರಷ್ಟು ಹೆಚ್ಚಬೇಕು' ಎಂಬ ಆಶಯ ವ್ಯಕ್ತಪಡಿಸಿದರು.

ಸಿಎಫ್‌ಟಿಆರ್‌ಐ ನಿರ್ದೇಶಕ ಪ್ರೊ.ರಾಮ್ ರಾಜಶೇಖರನ್ ಮಾತನಾಡಿ, ರೈತರು ಬೆಳೆಯುವ ಧಾನ್ಯಗಳನ್ನು ಪದಾರ್ಥಗಳಾಗಿ ಮಾಡಿ ಕಂಪೆನಿಗಳಿಗೆ ಸಂಸ್ಥೆ ಮೂಲಕ ಸರಬರಾಜು ಮಾಡಲಾಗುತ್ತಿದೆ. ರೈತರು ಆಹಾರ ಸಂಸ್ಕರಣ ಘಟಕವನ್ನು ಆರಂಭಿಸಿ ಆದಾಯ ಹೊಂದಬಹುದು. ಇದಕ್ಕೆ ಬೇಕಾದ ತಂತ್ರಜ್ಞಾನವನ್ನು ಸಂಸ್ಥೆ ಉಚಿತವಾಗಿ ನೀಡುತ್ತದೆ ಎಂದರು.

ರೈತಮಿತ್ರ ಕಂಪೆನಿ ನಿರ್ದೇಶಕ ಟಿ.ವಿ.ಗೋಪಿನಾಥ್, ರಾಜ್ಯ ಕೃಷಿ ಬೆಲೆ ಆಯೋಗ ಅಧ್ಯಕ್ಷ ಟಿ.ಎನ್.ಪ್ರಕಾಶ್ ಕಮ್ಮರಡಿ, ಕರ್ನಾಟಕ ವಲಯದ ನಬಾರ್ಡ್ ಮುಖ್ಯ ಪ್ರಧಾನ ವ್ಯವಸ್ಥಾಪಕ ಎಂ.ಐ.ಗಾಣಿಗಿ, ಬೆಂಗಳೂರು ಗಾಂಧಿ ಕೃಷಿ ವಿ.ವಿ ಕುಲಪತಿ ಎಚ್.ಶಿವಣ್ಣ, ಸಿಂಡಿಕೇಟ್ ಬ್ಯಾಂಕ್ ಉಪ ಪ್ರಧಾನ ವ್ಯವಸ್ಥಾಪಕ ಎಸ್.ಎಂ.ದೇಸಾಯಿ, ರಾಜ್ಯ ಮಾರುಕಟ್ಟೆ ವ್ಯವಸ್ಥಾಪಕ ಸಿ.ಎಸ್.ಪಾಟೀಲ, ಭಾರತೀಯ ರೈತ ಸಂಘಟನೆಗಳ ಒಕ್ಕೂಟ ಅಧ್ಯಕ್ಷ ಆರ್.ವಿ.ಗಿರಿ ವೇದಿಕೆ ಮೇಲಿದ್ದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರ್ ಶಾಂತಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಎಸ್.ಎನ್.ಬನವಣ್ಣನವರ ಸ್ವಾಗತಿಸಿದರು.



ಮೈಸೂರಿನ ಕಲಾಮಂದಿರದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘ ಮಂಗಳವಾರ ಆಯೋಜಿಸಿದ್ದ ರಾಜ್ಯಮಟ್ಟದ ರೈತರ ಸಮಾವೇಶವನ್ನು ಉದ್ಘಾಟಿಸಿದ ಕೇಂದ್ರ ಸರ್ಕಾರದ ನೀತಿ ಆಯೋಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಮಿತಾಬ್ ಕಾಂತ್ ಮಾತನಾಡಿದರು

**ಮಣ್ಣಿನ ಪರೀಕ್ಷೆಗೆ ಸಂಬಂಧಿಸಿ 2017ರ ಅಂತ್ಯಕ್ಕೆ ದೇಶದ 14 ಕೋಟಿ ರೈತ ಕುಟುಂಬಗಳಿಗೆ ಮಣ್ಣು ಪರೀಕ್ಷಾ ಕಾರ್ಡ್ ನೀಡಲಾಗುತ್ತದೆ**

**ಅಮಿತಾಬ್ ಕಾಂತ್,**

ಸಿಇಒ, ಕೇಂದ್ರ ಸರ್ಕಾರದ ನೀತಿ ಆಯೋಗ